# ಪಿಇಎಸ್ ಇಂಜಿನಿಯರ್ ಕಾಲೇಜಿಗೆ ರಾಷ್ಟ್ರೀಯ ಮಟ್ಟದಲ್ಲಿ 147ನೇ ರ್‍ಯಾಂಕ್

ಮಂಡ್ಯ, ಜೂ.15 (ನಾಗಯ್ಯ)- ನಗರದ ಪಿಇಎಸ್ ಇಂಜಿನಿಯರಿಂಗ್ ಕಾಲೇಜು ರಾಷ್ಟ್ರೀಯ ಸಾಂಸ್ಥಿಕ ಶ್ರೇಯಾಂಕ ಚೌಕಟ್ಟಿನ ಎನ್‌ಐಆರ್ ಎಫ್ ಇಂಜಿನಿಯರಿಂಗ್ ಸಂಸ್ಥೆಗಳ ವಿಭಾಗದಲ್ಲಿ ರಾಷ್ಟ್ರ ಮಟ್ಟದಲ್ಲಿ 147ನೇ ರ್‍ಯಾಂಕ್ ಗಳಿಸಿದೆ ಎಂದು ಕಾಲೇಜಿನ ಪ್ರಾಂಶುಪಾಲ ಡಾ.ಹೆಚ್.ವಿ. ರವೀಂದ್ರ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಭಾರತದ ಮಾನವ ಸಂಪನ್ಮೂಲ ಅಭಿವೃದ್ಧಿ ಇಲಾಖೆ ಸಚಿವ ರಮೇಶ್ ಪೋರ್ಕಿಯಾಲ್ ಅವರು, ಜೂ.11ರಂದು ಅಧಿಕೃತವಾಗಿ ರ್‍ಯಾಂಕಿಂಗ್ ಪಟ್ಟಿ ಘೋಷಣೆ ಮಾಡಿದ್ದು, 2019ರಲ್ಲಿ 161ನೇ ರ್‍ಯಾಂಕ್‌ನಲ್ಲಿದ್ದ ಕಾಲೇಜು 15 ಸ್ಥಾನಗಳ ಏರಿಕೆ ಕಂಡಿದೆ ಎಂದರು.

ಈ ರ್‍ಯಾಂಕಿಂಗ್ ಪ್ರಕ್ರಿಯೆ ಬೋಧನಾ ಕಲಿಕೆ ಮತ್ತು ಸಂಪನ್ಮೂಲಗಳು, ಸಂಶೋಧನೆ ಮತ್ತು ವೃತ್ತಿಪರ ಅಭ್ಯಾಸಗಳು, ಗುಣಮಟ್ಟದ ಪದವೀಧರರ ಸೃಷ್ಟಿ, ವಿಸ್ತರಣೆ ಮತ್ತು ಒಗ್ಗೂಡುವಿಕೆ ಹಾಗೂ ಗ್ರಹಿಕೆ ಎಂಬ ನಿಯತಾಂಕಗಳನ್ನು ಒಳಗೊಂಡಿರುತ್ತದೆ. ಭಾರತದಲ್ಲಿ 10 ಸಾವಿರ ಇಂಜಿನಿಯರಿಂಗ್ ವಿದ್ಯಾ ಸಂಸ್ಥೆಗಳ ಪೈಕಿ 1071 ವಿದ್ಯಾ ಸಂಸ್ಥೆಗಳು ರ್‍ಯಾಂಕಿಂಗ್ ಅರ್ಹತೆ ಪಡೆದಿದ್ದವು. ಈ ಪೈಕಿ 200 ಕಾಲೇಜುಗಳನ್ನು ರ್‍ಯಾಂಕಿಂಗ್ ಪಟ್ಟಿಗೆ ಆಯ್ಕೆ ಮಾಡಿದ್ದು, ಕರ್ನಾಟಕದ 21 ಕಾಲೇಜುಗಳ ಆಯ್ಕೆ ಪಟ್ಟಿಯಲ್ಲಿ ಪಿಇಎಸ್ ಇಂಜಿನಿಯರಿಂಗ್ ಕಾಲೇಜು 17ನೇ ಸ್ಥಾನದಲ್ಲಿದೆ ಎಂದರು.



ಕಾಲೇಜು ಒಟ್ಟಾರೆ ಶ್ರೇಯಾಂಕ ವರ್ಗದಲ್ಲಿ ರಾಷ್ಟ್ರೀಯ ಮಟ್ಟದಲ್ಲಿ 151-200ನೇ ಬ್ಯಾಂಡ್‌ನಲ್ಲಿ ಸ್ಥಾನ ಪಡೆದಿದ್ದು, ಕಾಲೇಜಿನ ಮ್ಯಾನೇಜ್‌ಮೆಂಟ್ ತಂಡದವರ ಮಾರ್ಗದರ್ಶನ ಮತ್ತು ಬೆಂಬಲದೊಂದಿಗೆ ಈ ಸಾಧನೆ ಮಾಡಲು ಸಾಧ್ಯವಾಯಿತು. ಇದರಿಂದಾಗಿ ಕಾಲೇಜು ಶೈಕ್ಷಣಿಕ ಸ್ವಾಯತ್ತ ಸ್ಥಿತಿಯನ್ನು 2023-24ರವರೆಗೆ ಹಾಗೂ ಸ್ನಾತಕ ಪೂರ್ವ ಪದವಿಗಳಿಗೆ ಶಾಶ್ವತ ಅಂಗೀಕರಿಸುವಿಕೆಗಳನ್ನು 2024-25 ರವರೆಗೆ ಉಡುಗೊರೆಯಾಗಿ ಪಡೆದಿದೆ ಎಂದರು.

ಸಂಸ್ಥೆಯು ನ್ಯಾಕ್ ಮಂಡಳಿ ಹಾಗೂ ಎನ್‌ಬಿಐನಿಂದಲೂ ಸಹ ಮಾನ್ಯತೆ ಪಡೆದಿದೆ ಎಂದರು. ಪತ್ರಿಕಾಗೋಷ್ಠಿಯಲ್ಲಿ ಕಾಲೇಜಿನ ಡೀನ್ ಡಾ.ಬಿ.ಎಸ್.ಶಿವಕುಮಾರ್. ಪ್ರಾಧ್ಯಾಪಕರಾದ ಡಾ.ದಿನೇಶ್ ಪ್ರಭು, ಡಾ.ಗಿರೀಶ್, ಡಾ.ರಾಮಲಿಂಗೇಗೌಡ ಇತರರಿದ್ದರು.